ವಿದ್ಯಾರ್ಥಿಗಳಲ್ಲಿ ಕೌಶಲ್ಯ, ನಾವೀನ್ಯತೆ ಸಾಮರ್ಥ್ಯ ವೃದ್ಧಿಗೆ ಕ್ರಮ: ಶ್ಯಾಮರಾಜು

ಸಂ.ಕ.ಸಮಾಚಾರ, ಬೆಂಗಳೂರು

ವಿದ್ಯಾರ್ಥಿಗಳಲ್ಲಿ ಕೌಶಲ್ಯ, ನಾವೀನ್ಯತೆ ಸಾಮರ್ಥ್ಯ ವೃದ್ಧಿಗೆ ಅಗತ್ಯ ಒತ್ತು ನೀಡಲಾಗುತ್ತಿದೆ ಎಂದು ರೇವಾ ವಿವಿ ಕುಲಪತಿ ಡಾ.ಪಿ.ಶ್ಯಾಮರಾಜು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತವು ಇದೀಗ ಏರೋಸ್ಪೇಸ್, ಎಲೆಕ್ಟ್ರಿಕ್ ಮೊಬಿಲಿಟಿ, ಆಟೋಮೆಷನ್, ಸೆಮಿಕಂಡಕ್ಟರ್ಸ್ ಕ್ಷೇತ್ರಗಳಲ್ಲಿ ಬಹಳ ವೇಗವಾಗಿ ವಿಸ್ತರಣೆ ಆಗುತ್ತಿದೆ. ಈ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳ ಜ್ಞಾನವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದರು.

ಬಹುಶಿಸ್ತೀಯ ಕಲಿಕೆ ಮೂಲಕ ಎಐ ಸಂಯೋಜಿತ ಪಠ್ಯಕ್ರಮ, ಸೆಂಟರ್ಸ್ ಆಫ್ ಎಕ್ಸಲೆನ್ಸ್, ಉದ್ಯಮ ಸಹಯೋಗ, ಪ್ರಾಯೋಗಿಕತೆ ಹಾಗೂ ವಿದ್ಯಾರ್ಥಿವೇತನ ಉಪಕ್ರಮಗಳನ್ನು ಮೂಲಕ ನಿರ್ಮಿಸುತ್ತಿದ್ದೇವೆ. ನಮ್ಮ ದೃಷ್ಟಿಕೋನ ಜವಾಬ್ದಾರಿಯುತ ನಾಯಕರನ್ನು ಪೋಷಣೆ ಮಾಡುವುದು ಹಾಗೂ ಉದ್ಯಮಿಗಳಾಗಲು ಶಿಕ್ಷಣ ಸಿದ್ಧಾಂತಕ್ಕೆ ಪೂರಕವಾದ ನಾಯಕರನ್ನು ರೂಪಿಸುವುದಾಗಿದೆ ಎಂದು ತಿಳಿಸಿದರು. ರೇವಾ ಬಿಜಿನೆಸ್ ಸ್ಕೂಲ್, ಕಾಮರ್ಸ್ ಮ್ಯಾನೇಜ್‌ಮೆಂಟ್ ಪ್ರಾಧ್ಯಾಪಕ ಡೀನ್ ಡಾ. ಶುಭಾ ಮಾತನಾಡಿ, ರೇವಾ ವಿವಿಯಲ್ಲಿ ನಾವೀನ್ಯತೆಯ, ಉದ್ಯಮ ಪ್ರಸ್ತುತತೆಯ ಹಾಗೂ ಭವಿಷ್ಯದ ಮೇಲೆ ದೃಷ್ಟಿ ನೆಟ್ಟಿ ಪಠ್ಯಕ್ರಮದ ಅಳವಡಿಕೆಗೆ ಒತ್ತು ನೀಡಲಾಗುವುದು ಎಂದರು. ಈ ವೇಳೆ ಅಡ್ಮಿಷನ್ ನಿರ್ದೇಶಕ ಗೌರವ್ ಯಾದವ್, ರೇವಾ ವಿವಿಯ ರಿಜಿಸ್ಟ್ರಾರ್ ಡಾ.ಎಂ.ಧನಂಜಯ್ ಮತ್ತಿತರರಿದ್ದರು.

ರೋಬೋಟಿಕ್ ತಂತ್ರಜ್ಞಾನದಿಂದ ಬೇಕಾಬಿಟ್ಟಿ ರಸ್ತೆ ಅಗೆತಕ್ಕೆ ಕಡಿವಾಣ

399 ಕಡೆ ನೀರು ಸೋರಿಕೆ, ಪೈಪ್‌ಲೈನ್ ದೋಷ ಪತ್ತೆ

ಸಂ.ಕ.ಸಮಾಚಾರ, ಬೆಂಗಳೂರು

ಬೆಂಗಳೂರು ಜಲಮಂಡಳಿ ಅಳವಡಿಸಿಕೊಂಡಿರುವ ರೋಬೋಟಿಕ್ ತಂತ್ರಜ್ಞಾನದ ಯಶಸ್ವಿ ಬಳಕೆಯನ್ನು ಮುಂದುವರಿಸಿದೆ. ಕಳೆದ ಆರು ತಿಂಗಳಲ್ಲಿ 32,661 ಮೀಟರ್‌ಗಳ ತಪಾಸಣೆ ನಡೆಸಿದ್ದು, 399 ಸ್ಥಳಗಳಲ್ಲಿ ರಸ್ತೆ ಅಗತೆವನ್ನು ತಪ್ಪಿಸಿದೆ.

ನಗರದ ಸಂಚಾರ ದಟ್ಟಣೆಗೆ ಕಿರಿಕಿರಿಯಾಗದಂತೆ ಹಾಗೂ ವಾಹನ ಸವಾರರಿಗೆ ಯಾವುದೇ ತೊಂದರೆಯಾಗದಂತೆ ಎಚ್ಚರವಹಿಸಿರುವ ಬೆಂಗಳೂರು ಜಲಮಂಡಳಿಯು, ಕಳೆದ ವರ್ಷ ನವೆಂಬರ್‌ನಲ್ಲಿ ಚಾಲನೆ ನೀಡಿದ್ದ ಅತ್ಯಾಧುನಿಕ ರೋಬೋಟಿಕ್ ತಂತ್ರಜ್ಞಾನವನ್ನು ಪೈಪ್‌ಲೈನ್ ಹಾಗೂ ಒಳಚರಂಡಿ ದೋಷಗಳನ್ನು ಪತ್ತೆಹಚ್ಚಲು ಯಶಸ್ವಿಯಾಗಿ ಬಳಸಿಕೊಂಡಿದೆ.

ಈ ವಿನೂತನ ತಂತ್ರಜ್ಞಾನದ ನೆರವಿನಿಂದ ಕಳೆದ ಆರು ತಿಂಗಳಲ್ಲಿ ನಗರದ ಬರೋಬ್ಬರಿ 399 ಕಡೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ರಸ್ತೆ ಅಗೆಯುವುದನ್ನು ತಪ್ಪಿಸಲಾಗಿದ್ದು ಇದರಿಂದ ನಗರದ ಪ್ರಯಾಣಿಕರು ಮತ್ತು ವಾಹನ ಸವಾರರು ಅನುಭವಿಸುತ್ತಿದ್ದ ಟ್ರಾಫಿಕ್ ಬವಣೆಗೆ ಬಹುದೊಡ್ಡ ಮಟ್ಟದಲ್ಲಿ ಮುಕ್ತಿ ಸಿಕ್ಕಿದೆ.

ಬೆಂಗಳೂರಿನಂತಹ ಮಹಾನಗರದಲ್ಲಿ ರಸ್ತೆ ಅಗೆಯುವುದು ವಾಹನ ಸವಾರರಿಗೆ ಮತ್ತು ಸಾರ್ವಜನಿಕರಿಗೆ ಎಷ್ಟು ಕಿರಿಕಿರಿ ಉಂಟು ಮಾಡುತ್ತದೆ ಎಂಬುದು ನಮಗೆ ಅರಿವಿದೆ. ಈ ಹಿಂದೆ, ಪೈಪ್‌ಲೈನ್ ಸೋರಿಕೆ ಅಥವಾ ಒಳಚರಂಡಿ ದೋಷವನ್ನು ಪತ್ತೆಹಚ್ಚಲು ರಸ್ತೆಯುದ್ದಕ್ಕೂ ಅಗೆಯುವುದು ಅನಿವಾರ್ಯವಾಗಿತ್ತು. ಇದರಿಂದಾಗಿ ಭಾರೀ ಟ್ರಾಫಿಕ್ ಜಾಮ್ ಉಂಟಾಗುತ್ತಿತ್ತು. ಇದನ್ನು ತಪ್ಪಿಸುವ ನಿಟ್ಟಿನಲ್ಲಿ ಅತ್ಯಾಧುನಿ ರೋಬೋಟಿಕ್ ತಂತ್ರಜ್ಞಾನವನ್ನು ಕಾರ್ಯಾಚರಣೆಗೆ ಅಳವಡಿಸಿಕೊಂಡಿದ್ದೇವೆ.

ರೋಬೋಟಿಕ್ ತಪಾಸಣೆ

ಈ ಯಂತ್ರಗಳು ರಸ್ತೆಯನ್ನು ಅಗೆಯದೆಯೇ ಪೈಪ್‌ಲೈನ್ ಒಳಗೆ ಚಲಿಸಿ, ನಿಖರವಾಗಿ ದೋಷವನ್ನು ಪತ್ತೆಹಚ್ಚಿವೆ. ಇದರಿಂದ ಸತತ ಸುಮಾರು 32 ಕಿಲೋಮೀಟರ್ ವ್ಯಾಪ್ತಿಯ 399 ಕಡೆಗಳಲ್ಲಿ ರಸ್ತೆ ಅಗೆಯುವುದು ತಪ್ಪಿದ್ದು, ಸಾರ್ವಜನಿಕರಿಗೆ ತೊಂದರೆ ಆಗುವುದು ತಪ್ಪಿಸಲಾಗಿದೆ.

-ರಾಮ್‌ಪ್ರಸಾತ್ ಮನೋಹರ್, ಜಲಮಂಡಳಿ ಅಧ್ಯಕ್ಷ

ವಾಣಿಜ್ಯ ತೆರಿಗೆ ವಂಚಿಸಿದ್ದ ಇಬ್ಬರ ಬಂಧನ

2384 ಕೋಟಿ ರೂಪಾಯಿ ಐಟಿಸಿ ವಂಚನೆ ಜಾಲ ಪತ್ತೆ

ಬೆಂಗಳೂರು: ವಾಣಿಜ್ಯ ತೆರಿಗೆ ಇಲಾಖೆ ಇಬ್ಬರು ಶಂಕಿತರನ್ನು ಬಂಧಿಸುವ ಮೂಲಕ 2,384 ಕೋಟಿ ರೂ.ಗಳ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ವಂಚನೆ ಜಾಲವನ್ನು ಭೇದಿಸಿದೆ.

ಸಲೀಮುಲ್ಲಾ ಬೇಗ್ (49), ಹಸೈನ್ ಬೇಗ್ (35) ಬಂಧಿತ ಆರೋಪಿಗಳು. ಗುಪ್ತಚರ ವಿಭಾಗದ ಮಾಹಿತಿಯ ಆಧಾರದ ಮೇಲೆ, ಟಂಗ್‌ಸ್ಟನ್ ಕಾರ್ಬೈಡ್ ಸ್ಕ್ರ್ಯಾಪ್, ಇ-ತ್ಯಾಜ್ಯ ಮತ್ತು ಇತರ ಸ್ಕ್ರಾಪ್ ವಸ್ತುಗಳ ವ್ಯಾಪಾರದಲ್ಲಿ ತೊಡಗಿರುವ ಸಂಸ್ಥೆಗಳ ಮೂಲಕ ಕಾರ್ಯನಿರ್ವಹಿಸುತ್ತಿರುವ 'ಹೆಚ್ಚು ಸಂಘಟಿತ' ನಕಲಿ ಇನ್ ವಾಯ್ಸಿಂಗ್ ಕಾರ್ಟೆಲ್ ಅನ್ನು ಪತ್ತೆಹಚ್ಚಲಾಗಿದೆ ಎಂದು ಇಲಾಖೆ ಹೇಳಿದೆ. ಸ್ವೀಕಾರಕ್ಕೆ ಅರ್ಹವಲ್ಲದ ಐಟಿಸಿಯನ್ನು ರವಾನಿಸಿ ಸರ್ಕಾರದ ಬೊಕ್ಕಸಕ್ಕೆ ಭಾರಿ ನಷ್ಟ ಉಂಟು ಮಾಡಲಾಗಿದೆ.

ತನಿಖೆಯಲ್ಲಿ ಎಸ್‌ಕೆಎಸ್ ಟ್ರೇಡರ್ಸ್‌ನ ಸಲೀಮುಲ್ಲಾ 72 ನಕಲಿ ಪೂರೈಕೆದಾರ ಸಂಸ್ಥೆಗಳಿಂದ ವಂಚನೆ ಮೂಲಕ ನಕಲಿ ಐಟಿಸಿ ಪಡೆದಿದ್ದು, ಇದರಲ್ಲಿ ಸುಮಾರು 2,172 ಕೋಟಿ ರೂ.ಗಳ ಅನುಮಾನಾಸ್ಪದ ವಹಿವಾಟು ಮತ್ತು ಸುಮಾರು 382 ಕೋಟಿ ರೂ.ಗಳ ನಕಲಿ ಐಟಿಸಿ ಸೇರಿವೆ ಹಾಗೂ ನಾಯಂಡಹಳ್ಳಿಯ ಕೆಎಚ್ ಇ-ವೇಸ್ಟ್ ರಿಸೈಕ್ಲರ್‌ನ ಹಸೈನ್, 55 ನಕಲಿ ಪೂರೈಕೆದಾರ ಸಂಸ್ಥೆಗಳಿಂದ ನಕಲಿ ಐಟಿಸಿ ಪಡೆದಿದ್ದಾರೆಂದು ಆರೋಪಿಸಲಾಗಿದೆ. ಜಿಎಸ್‌ಟಿ ಕಾಯ್ದೆಯಡಿ ಬಂಧನ: ಜಿಎಸ್‌ಟಿ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಇಬ್ಬರನ್ನೂ ಬಂಧಿಸಲಾಗಿದೆ. ತನಿಖೆಯು 127 ನಕಲಿ ಸಂಸ್ಥೆಗಳನ್ನು ಒಳಗೊಂಡ ನಕಲಿ ಇನ್‌ವಾಯ್ಸಿಂಗ್ ಜಾಲವನ್ನು ಬಹಿರಂಗಪಡಿಸಿದೆ, ಇದರಲ್ಲಿ ಸುಮಾರು 2,384 ಕೋಟಿ ರೂ.ಗಳ ಒಟ್ಟು ಅನುಮಾನಾಸ್ಪದ ವಹಿವಾಟು ಮತ್ತು ಸುಮಾರು 420 ಕೋಟಿ ರೂ. ಗಳ ವಂಚನೆಯ ಐಟಿಸಿ ಇದೆ ಎಂದು ಇಲಾಖೆ ತಿಳಿಸಿದೆ. ತೆರಿಗೆ ವಂಚನೆಗೆ ನಕಲಿ ಕಂಪನಿಗಳು" ಐಟಿಸಿಯನ್ನು ನಿರ್ಬಂಧಿಸುವುದು ಅಥವಾ ನೋಟಿಸ್ ನೀಡುವಂತಹ ಇಲಾಖಾ ಕ್ರಮವನ್ನು ಪ್ರಾರಂಭಿಸಿದಾಗಲೆಲ್ಲಾ, ಆಪಾದಿತ ವಂಚಕರು ನಕಲಿ ಸಂಸ್ಥೆಗಳನ್ನು ಹುಟ್ಟುಹಾಕುತ್ತಾರೆ ಮತ್ತು ವಂಚನೆಯನ್ನು ಮುಂದುವರಿಸಲು ಯತ್ನಿಸುತ್ತಾರೆ.

ಇಂದಿನ ಕಾರ್ಯಕ್ರಮ

15-05-2026, ಗುರುವಾರ

ಬೆಳಗ್ಗೆ: ರಾಜ್ಯ ಯುವ ಕಾಂಗ್ರೆಸ್ ಸಮಿತಿ: ಡಿ.ಕೆ.ಶಿವಕುಮಾರ್ ಅವರ ಜನ್ಮದಿನ ಪ್ರಯುಕ್ತ ರಕ್ತದಾನ ಶಿಬಿರ, ಪೌರಕಾರ್ಮಿಕರು, ಆಟೋ ಚಾಲಕರಿಗೆ ದಿನಸಿ ಕಿಟ್ ವಿತರಣೆ ಕಾರ್ಯಕ್ರಮ. ಸ್ಥಳ: ಭಾರತ್ ಜೋಡೋ ಭವನ, ಕೆಪಿಸಿಸಿ. 9.00

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ: 'ಕ್ಯಾಂಪಸ್ ಟು ಕರಿಯರ್ ಸಮಿಟ್-'ಭವಿಷ್ಯಮುಖಿ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು' ಎರಡು ದಿನಗಳ ಸಮ್ಮೇಳನ. ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ. ವಿಶೇಷ ಸಂಚಿಕೆ ಬಿಡುಗಡೆ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಅಧ್ಯಕ್ಷತೆ: ಸಚಿವ ಡಾ.ಎಂ.ಸಿ.ಸುಧಾಕರ್. ಸ್ಥಳ ಹೋಟೆಲ್ ಲಲಿತ್ ಅಶೋಕ. 10.30

ರಂಗಚಿಂದಿರ, ಸಹಯೋಗ ಶಾರದಾ ಪ್ರತಿಷ್ಠಾನ, ಮಾಗಡಿ-ರಂಗನಾಯಕ: ಲೇಖಕ ರವಿ ಅಂಬೋಜಿರವರ ಗುಲಾಬಿ ಸೇನೆ ಕಾದಂಬರಿ ಪುಸ್ತಕ ಬಿಡುಗಡೆ. ಉದ್ಘಾಟನೆ: ಅಂತಾರಾಷ್ಟ್ರೀಯ ಜಾನಪದ ಗಾಯಕಿ ಸವಿತಕ್ಕ, ಮುಖ್ಯಅತಿಥಿ: ಕ.ಸಾ.ಪ ಬೆಂ.ನ. ಜಿಲ್ಲೆ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಲ್.ಎನ್ ಮುಕುಂದರಾಜ್, ಅಧ್ಯಕ್ಷತೆ: ಕರ್ನಾಟಕ ಲೇಖಕಿಯರ ಸಂಘದ ಮಾಜಿ ಅಧ್ಯಕ್ಷೆ ಡಾ.ಎಚ್.ಎಲ್.ಪುಷ್ಪ, ಸ್ಥಳ: ನಯನ ರಂಗಮಂದಿರ. ಕನ್ನಡ ಭವನ. 11.00

ಸಂಜೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತಕವಿ ಕನಸದಾಸ ತತ್ವಪದಕಾರರ ಅಧ್ಯಯನ ಕೇಂದ್ರ: ಕನಕದಾಸ ಸಮಗ್ರ ಸಾಹಿತ್ಯ ಅನುವಾದ ಸಂಪುಟಗಳ 40 ಕೃತಿಗಳ ಬಿಡುಗಡೆ ಮತ್ತು ಕನಕ ಶಿಲ್ಪವನ ಅನಾವರಣ: ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಶಾಸಕ ಆರ್. ಮುನಿರತ್ನ. ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ. 5.30

ತ.ನಾಡಿನ ಮುರುಗನ್ ದೇಗುಲಕ್ಕೆ ಇಂದು ಡಿಕೆಶಿ ಭೇಟಿ

ಬೆಂಗಳೂರು: ಜನ್ಮದಿನದ ಸಂಭ್ರಮದಲ್ಲಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಶುಕ್ರವಾರವೇ ತಮಿಳುನಾಡಿನ ಟ್ಯುಟಿಕೋರಿನ್‌ನ ತಿರುಚೆಂಡುರಿನ ಪ್ರಸಿದ್ಧ ಮುರುಗನ್ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ಬೆಳಗ್ಗೆ 7:30ಕ್ಕೆ ವಿಶೇಷ ವಿಮಾನದಲ್ಲಿ ಬೆಂಗಳೂರಿನಿಂದ ತೆರಳಲಿರುವ ಡಿಕೆಶಿ ಪೂಜೆ ಸಲ್ಲಿಸಿ ಸಂಜೆ 4:30ಕ್ಕೆ ಬೆಂಗಳೂರಿಗೆ ಹಿಂದಿರುಗಲಿದ್ದಾರೆ. ಇತ್ತೀಚೆಗಷ್ಟೆ ಪಾಂಡಿಚೇರಿಯ ಶನಿದೇವರ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದ್ದರು.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ
ಸೇಂಟ್ ಜಾನ್ಸ್ ಚರ್ಚ್ ರಸ್ತೆ ಶಾಖೆ, ನಂ. 13, ICON ಬಿಲ್ಡಿಂಗ್, ಕ್ಲೀವ್‌ಲ್ಯಾಂಡ್ ಟೌನ್, ಬೆಂಗಳೂರು - 560 005, ಸಂಪರ್ಕಿಸಿ :8928444964
E-Mail Id: UBIN0558923@unionbankofindia.bank

ಸ್ವಾಧೀನ ಸೂಚನೆ ನಿಯಮ 8(1) (ಸ್ಥಿರ ಆಸ್ತಿ)

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002 [ನಿಯಮ 8(1)]

i) ಸಾಲಗಾರರು: ಶ್ರೀ ರೋಹನ್ ಸದಾಶಿವ ಶೆಟ್ಟಿ, ನಂ. 594/ಎ, ಫ್ಲಾಟ್ ನಂ. ಜಿ1 ,ಸಾಯಿ ಅಪಾರ್ಟ್‌ಮೆಂಟ್, ತ್ರಿಕೊನಿ ಗಾರ್ಡನ್ ಹತ್ತಿರ, ಸಾಂಗ್ಲಿ, ಮಹಾರಾಷ್ಟ್ರ- 416 416.
ನಂ. 68/1, 158, ಮಲ್ಲತಹಳ್ಳಿ ಮಂಗಳೂರು ಕಾಲೇಜ್‌ನ ಹಿಂಭಾಗ, ಉಲ್ಲಾಳ ಮುಖ್ಯ ರಸ್ತೆ, ಬೆಂಗಳೂರು - 560 056.
ರೂಂ ನಂ. 244, ಬ್ಲಾಕ್, ರಿತಾಜ್ ಬಿಲ್ಡಿಂಗ್ ಹತ್ತಿರ, ದುನೇಸ್ ಗ್ರಾನ, ದುಬೈ ಇನ್ವೆಸ್ಟ್‌ಮೆಂಟ್ ಪಾರ್ಕ್ 2, ದುಬೈ, ಯುಎಇ, ಹತ್ತಿರ
ii) ಶ್ರೀ ರಿಷಭ್ ಸದಾಶಿವ ಶೆಟ್ಟಿ ಶ್ರೀನಿವಾಸ್ ಟಿ., ನಂ. 68/1, 158/1, ಜ್ಞಾನಜ್ಯೋತಿ ನಗರ, ಮಂಗಳೂರು ಪಿಯು ಕಾಲೇಜನ ಹಿಂಭಾಗ, ಮಲ್ಲತಹಳ್ಳಿ, ಉಲ್ಲಾಳ ಉಪನಗರ, ಬೆಂಗಳೂರು - 560 056.
ಕೆಳಸಹಿದಾರರು, **ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಪ್ರಾದೇಶಿಕ ಕಚೇರಿ ,ಬೆಂಗಳೂರು ಪೂರ್ವ** ಇದರ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆಕ್ಟ್ 2002ರ ಅನ್ವಯ ಮತ್ತು 2002ರ (2002ರ ಆಕ್ಟ್ ನಂ. 54) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(2)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **ರೂ.1,96,26,192.36** (ರೂಪಾಯಿ ಒಂದು ಕೋಟಿ ತೊಂಬತ್ತಾರು ಲಕ್ಷ ಇಪ್ಪತ್ತಾರು ಸಾವಿರದ ಒಂದು ನೂರತೊಂಬತ್ತೆರಡು ಮತ್ತು ಪೈಸೆ ಮೂವತ್ತಾರು ಮಾತ್ರ) ದಿನಾಂಕ 16.02.2026ರಂತೆ ಮತ್ತು ಬಡ್ಡಿಮತ್ತು ಇತರ ವೆಚ್ಚಗಳೊಂದಿಗೆ ಮರುಪಾವತಿಮಾಡಲು ಸಾಲಗಾರರು ಮತ್ತು ಜಾಮೀನುದಾರರಿಗೆ ದಿನಾಂಕ **16.02.2026** ರಂದು ತಗಾದೆ ಸೂಚನೆ ನೀಡಲಾಗಿತ್ತು.
ಸಾಲಗಾರರು ಸದರಿ ಮೊಬಲಗನ್ನುಮರುಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆಯ ಕಲಂ 13(4)ರೂಂದಿಗೆ ನಿಯಮ 8 ರಲ್ಲಿಪ್ರದತ್ತ ಅಧಿಕಾರದನ್ವಯ ದಿನಾಂಕ **11.05.2026 ರಂದು ಸ್ವಾಧೀನ ಪಡಿಸಿಕೊಂಡಿದ್ದಾರೆ** ಎಂದು ಸಾಲಗಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಿದೆ.
ನಿರ್ದಿಷ್ಟವಾಗಿ ಸಾಲಗಾರರಿಗೆ /ಜಾಮೀನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು **ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸೇಂಟ್ ಜಾನ್ಸ್ ಚರ್ಚ್ ರಸ್ತೆ (58920) ಶಾಖೆ**, ಬೆಂಗಳೂರು ಇವರಿಗೆ ಬರಬೇಕಾದ ಬಾಕಿ ಮೊತ್ತ **ರೂ.1,96,26,192.36** (ರೂಪಾಯಿ ಒಂದು ಕೋಟಿ ತೊಂಬತ್ತಾರು ಲಕ್ಷ ಇಪ್ಪತ್ತಾರು ಸಾವಿರದ ಒಂದು ನೂರ ತೊಂಬತ್ತೆರಡು ಮತ್ತು ಪೈಸೆ ಮೂವತ್ತಾರು ಮಾತ್ರ) ಮತ್ತು ಬಡ್ಡಿಯನ್ನು ಚುಕ್ತಾ ಮಾಡುವುದಕ್ಕೆ ಒಳಪಟ್ಟಿದೆ.
ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು

ಸ್ಥಿರಾಸ್ತಿಯ ವಿವರ

ಷೆಡ್ಯೂಲ್ ಎ ಆಸ್ತಿ : ಬೆಂಗಳೂರು ಜಿಲ್ಲೆ, ಕೆಂಗೇರಿ ಹೋಬಳಿ, ಹಲಗೆವಡೇರಹಳ್ಳಿ ಗ್ರಾಮ, ಇಲ್ಲಿ ಪರಿವರ್ತಿತ ಸರ್ವೆ ನಂ. 67ರ ಭಾಗ, ದಿನಾಂಕ 18.12.1991ರ ವಿಷೇಶ ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ ಬೆಂಗಳೂರು ಇವರ ಆದೇಶನ ನಂ. Bo. B Dis. ALN. SR (S) 208/89-90ರಂತೆ ಪರಿವರ್ತಿತವಾಗಿದೆ ಹಾಲಿ ಬಿಬಿಎಂಪಿ ವ್ಯಾಪ್ತಿಯಲ್ಲಿದ್ದುವಾರ್ಡ್‌ನ ಹೆಸರು ರಾಜರಾಜೇಶ್ವರಿ ನಗರ, ವಾರ್ಡ್ ನಂ. 160, ಇಲ್ಲಿರುವ ಆಸ್ತಿಯ ಹೊಸ ಮುನಿಸಿಪಲ್ ನಂ. 67, ಬಿಬಿಎಂಪಿ ಖಾತಾ ನಂ. 176/67/20, ಅಳತೆ ಪೂರ್ವದಿಂದ ಪಶ್ಚಿಮಕ್ಕೆ : 60 ಅಡಿ , ಉತ್ತರದಿಂದ ದಕ್ಷಿಣಕ್ಕೆ : 40 ಅಡಿ ಒಟ್ಟು 2400 ಚದರ ಅಡಿ ಜೊತೆಗೆ ಆಸ್ತಿಯ ಮೇಲಿನ ಮೇಲ್ಛೈ ಮೇಲಿನ ತಳಭಾಗದ ಎಲ್ಲಾಹಕ್ಕುಗಳನ್ನು ಒಳಗೊಂಡು ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಿವೇಶನ ನಂ. 43, ಉತ್ತರಕ್ಕೆ : ನಿವೇಶನ ನಂ.21, ದಕ್ಷಿಣಕ್ಕೆ : ನಿವೇಶನ ನಂ.19.
ಷೆಡ್ಯೂಲ್ ಬಿ ಆಸ್ತಿ : ಷೆಡ್ಯೂಲ್ ಎ ಆಸ್ತಿಯಲ್ಲಿ 480.00 ಚದರ ಅಡಿ ಅವಿಭಜಿತ ಪಾಲು, ಹಕ್ಕು, ಅಧಿಕಾರ ಹಿತಾಸಕ್ತಿ ಮತ್ತು ಮಾಲೀಕತ್ವ
ಷೆಡ್ಯೂಲ್ ಸಿ ಆಸ್ತಿ : ಷೆಡ್ಯೂಲ್ ಎ ಆಸ್ತಿಯಲ್ಲಿ ನಿರ್ಮಾಣವಾದ "ಎಂಎಸ್‌ಆರ್ ನಿಗಂ" ಎಂಬ ಅಪಾರ್ಟ್‌ಮೆಂಟ್ ಕಟ್ಟಡದಲ್ಲಿನ 3 ಬೆಡ್ ರೂಂ ಇರುವ ಫ್ಲಾಟ್ ನಂ. ಟಿಎಫ್-1, 3ನೇ ಮಹಡಿ, ನಿರ್ಮಿತ ಪ್ರದೇಶ 2250 ಚದರ ಅಡಿ ಇದರಲ್ಲಿ ಎಲ್ಲಅಪಾರ್ಟ್‌ಮೆಂಟ್ ಮಾಲೀಕರು ಬಳಸುವ ಸಾಮಾನ್ಯ ಪ್ರದೇಶಗಳು ಮತ್ತು ಇತರ ಸಾಮಾನ್ಯ ಬಳಕೆಯ ಪ್ರದೇಶಗಳ ಮೇಲಿನ ಪ್ರಮಾಣಾನುಗತ ಪಾಲು ಒಳಗೊಂಡಿದೆ, ಜೊತೆಗೆ "ಎಂಎಸ್‌ಆರ್ ನಿಗಂ" ಎಂಬ ಕಟ್ಟಡದಲ್ಲಿನ ಟಿಎಫ್-1, ರಲ್ಲಿ ಒಂದು ಮೇಲ್ಛಾವಣಿ ಇರುವ ಕಾರು ನಿಲುಗಡೆ ಪ್ರದೇಶ ಒಳಗೊಂಡಿದ್ದು